ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹರಿಹರ.

Ex ಃ71/09

ಆರ್.ಡಬ್ಲೂಃ4

| | | |
|---|---|---|
| ಸಾಕ್ಷಿದಾರರ ಹೆಸರು | ಃಃ | ಶ್ರೀನಿವಾಸ ಎನ್.ಜೆ. |
| ತಂದೆಯ ಹೆಸರು | ಃಃ | ಎನ್. ಆರ್. ಜಗನ್ನಾಥರೆಡ್ಡಿ |
| ವಯಸ್ಸು | ಃಃ | 42 ವರ್ಷ |
| ಉದ್ಯೋಗ | ಃಃ | ತಾಲ್ಲೂಕು ಸರ್ವೆಯರ್ |
| ವಾಸ ಸ್ಥಳ | ಃಃ | ಹರಿಹರ. |

ದಿನಾಂಕಃ 07.06.2017 ರಂದು ಪ್ರಮಾಣೀಕರಿಸಲಾಯಿತು.

ಃಃಮುಖ್ಯ ವಿಚಾರಣೆ ಶ್ರೀ ಬಿ.ಎಚ್ ವಕೀಲರಿಂದಃಃ

ಈ ಪ್ರಕರಣದಲ್ಲಿ ಹಾಜರಾಗಿ ಸಾಕ್ಷಿ ನುಡಿಯಲು ನನಗೆ ಸಮನ್ಸ್ ಬಂದಿರುತ್ತದೆ. ನಾನು 10 ವರ್ಷಗಳಿಂದ ಹರಿಹರ ತಾಲ್ಲೂಕಿನಲ್ಲಿ ಸರ್ವೆಯರ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಈ ಕೇಸ್‌ನಲ್ಲಿ ನ್ಯಾಯಾಲಯದ ಅಮೀನರಿಗೆ ಸಹಾಯ ಮಾಡಲು ನ್ಯಾಯಾಲಯದಿಂದ ಆದೇಶ ಇತ್ತು, ಆ ಮೇರೆಗೆ ನಾನು ದಿಃ 23.06.2012 ರಂದು ಹರಿಹರ ತಾಲ್ಲೂಕು ಹರಳಾಪುರ ಗ್ರಾಮದಲ್ಲಿನ ಸರ್ವೆ ನಂ 22/1 ಮತ್ತು 32/ಪಿ ಜಮೀನುಗಳ ಸ್ವಾದೀನ ಪಡಿಸುವ ಸಮಯದಲ್ಲಿ ನಾನು ಹಾಜರಿದ್ದೆ ಸ್ವಾದೀನ ನೀಡುವ ಪೂರ್ವದಲ್ಲಿ ನಾನು ಮೇಲೆ ಹೇಳಿದ ಜಮೀನುಗಳನ್ನು ಅಳತೆ ಮಾಡಿರುತ್ತೇನೆ. ತದನಂತರ ಜಮೀನುಗಳ ಸ್ವಾದೀನವನ್ನು ಅಮೀನರು ಹಾಲಮ್ಮ ಇವರಿಗೆ ವಹಿಸಿಕೊಟ್ಟಿರುತ್ತಾರೆ. ಈ ಬಗ್ಗೆ ಸ್ಥಳದಲ್ಲಿ ಮಹಜರ್ ಬರೆಯಲಾಗಿರುತ್ತದೆ. ಸಾಕ್ಷಿ ಮಹಜರ್ ನೋಡಿ ಗುರ್ತಿಸಿದ್ದು ಅದನ್ನು ಈಗಾಗಲೇ ನಿಸಿ-1 ಎಂದು ಗುರ್ತಿಸಲಾಗಿರುತ್ತದೆ. ಸಾಕ್ಷಿ ನಿಸಿ-1 ರಲ್ಲಿ ತನ್ನ ಸಹಿಯನ್ನು ನೋಡಿ ಗುರ್ತಿಸಿರುವುದರಿಂದ ಅದನ್ನು ನಿಸಿ-1ಡಿ ಎಂದು ಗುರ್ತಿಸಲಾಯಿತು.

ನಿಪಿ-41 ರಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ-41(ಬಿ) ಎಂದು ಗುರ್ತಿಸಲಾಯಿತು.

2ನೇ ಅರ್ಜಿದಾರರ ಪರ ವಕೀಲರಾದ ಶ್ರೀ ಕೆ.ಎಸ್.ಐ ಇವರಿಂದ ಪಾಟೀ ಸವಾಲುಃ-

2. ಎಫ್.ಡಿ.ಪಿ ಪ್ರಕರಣದಲ್ಲಿ ನ್ಯಾಯಾಲಯ ಆಸ್ತಿಗಳನ್ನು ವಿಭಾಗ ಮಾಡುವ ಸಮಯದಲ್ಲಿ ನಾನು ಅಳತೆ ಕಾರ್ಯ ಮಾಡಿರುವುದಿಲ್ಲ. ಎಫ್.ಡಿ.ಪಿ ಪ್ರಕರಣದಲ್ಲಿ ಆದ ಸರ್ವೆ ದಾಖಲೆಗಳ ಪ್ರಕಾರ ನಾನು ಸ್ವಾದೀನ ವಹಿಸಿಕೊಡುವ ಸಮಯದಲ್ಲಿ ಆಸ್ತಿಗಳನ್ನು ಅಳತೆ ಮಾಡಿರುತ್ತೇನೆ. ಎಫ್.ಡಿ.ಪಿ ಪ್ರಕರಣದಲ್ಲಿ ಆದ ಅಳತೆ ಕಾರ್ಯದ ದಾಖಲೆಗಳನ್ನು ಅಮೀನರಿಂದ ಪಡೆದಿದ್ದೆ. ಮಹಜರ್‌ರಿಗೆ ಸಹಿ ಮಾಡಿರುವುದನ್ನು ಹೊರತು ಪಡಿಸಿ ಅಳತೆ ಕಾರ್ಯ ಮಾಡಿದ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಅಳತೆ ಕಾರ್ಯವನ್ನು ಚೈನ್ ಮೂಲಕ ಮಾಡಿರುತ್ತೇನೆ. ಸದರಿ ವಿಚಾರವನ್ನು ಮಹಜರ್‌ನಲ್ಲಿ ಬರೆದಿರುವುದಿಲ್ಲ. ನಾನು ಮಹಜರ್‌ನ್ನು ಓದಿ ಸಹಿ ಮಾಡಿರುತ್ತೇನೆ.

3. ಸರ್ವೆ ನಂಬರ್ 32/ಪಿ 10 ಎಕರೆ 7 ಗುಂಟೆ ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಎಫ್.ಡಿ.ಪಿ ಸ್ಕೆಚ್ ಪ್ರಕಾರ ಜಮೀನನ್ನು ಗುರ್ತಿಸಿರುತ್ತೇನೆ. ಮಹಜರ್‌ನ್ನು ನಾನು ಹೇಳಿ ಬರೆಸಿರುವುದಿಲ್ಲ. ಸ್ವಾದೀನ ವಹಿಸಿದ ಜಮೀನಿನ ಸರ್ವೆ 32/ಪಿ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಹರಿಹರ-ಹರಪನಹಳ್ಳಿ ರೋಡ್, ಉತ್ತರಕ್ಕೆ ಕರಿಗೋವಿಂದಪ್ಪ ಮತ್ತು ಬೀರಪ್ಪ ಇವರ ಜಮೀನುಗಳು ಹಾಗೂ ದಕ್ಷಿಣಕ್ಕೆ ನಾಗಪ್ಪ ಇವರ ಜಮೀನು ಇರುತ್ತದೆ. ಅಳತೆ ಕಾರ್ಯವನ್ನು ಪೂರ್ವ ದಿಕ್ಕಿನಿಂದ ಪ್ರಾರಂಭ ಮಾಡಿ ಎಫ್.ಡಿ.ಪಿ ಸ್ಕೆಚ್ ಪ್ರಕಾರ 1 ಎಕರೆ 5 ಗುಂಟೆ ಜಮೀನನ್ನು ಗುರ್ತು ಮಾಡಿರುತ್ತೇನೆ. ನಿಪಿ-41 ರಲ್ಲಿ ನಮೂದು ಮಾಡಲಾದ ಚಕ್ಕುಬಂದಿ 10 ಎಕರೆ 7 ಗುಂಟೆ ಸಂಬಂದಿಸಿರುತ್ತದೆ ಮತ್ತು ಅದು 1 ಎರಕೆ 5 ಗುಂಟೆ ಸಂಬಂದಿಸಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಎಫ್.ಡಿ.ಪಿ ಸ್ಕೆಚ್ ಪ್ರಕಾರ ಅಳತೆ ಕಾರ್ಯ ಮಾಡಿರುವುದಿಲ್ಲ ಮತ್ತು ಜಮೀನು ಗುರ್ತಿಸಿರುವುದಿಲ್ಲ ಅಂದರೆ ಸರಿಯಲ್ಲ. ನ್ಯಾಯಾಲಯದ ಅಮೀನರು ತಯೂರು ಮಾಡಿದ

ಮಹಜರ್‌ಗೆ ಸಹಿ ಮಾಡಿರುವುದನ್ನು ಹೊರತು ಪಡಿಸಿ ನನಗೆ ಬೇರೆ ವಿಚಾರಗಳು ಗೊತ್ತಿಲ್ಲ ಅಂದರೆ ಸರಿಯಲ್ಲ.

4. ಸರ್ವೆ ನಂ 32/ಪಿ 10 ಎಕರೆ 7 ಗುಂಟೆ ಜಮಿನಿನ ಪೂರ್ವಕ್ಕೆ ಜಮೀನಿನ ಪಶ್ಚಿಮಕ್ಕೆ ಮೈಸೂರು ಕಿರ್ಲೋಸ್ಕರ್ ಕಂಪನಿಗೆ ಸೇರಿದ ಕಟ್ಟಡ ಇರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂಬರಿನಲ್ಲಿ 1 ಎಕರೆ 38 ಗುಂಟೆ ಜಮೀನು ಕಿರ್ಲೋಸ್ಕರ್ ಕಂಪಂನಿಗೆ ಸೇರಿಂದ ಎಂಬ ವಿಚಾರ ನನಗೆ ಗೊತ್ತಿಲ್ಲ. ಅಳತೆ ಕಾಲದಲ್ಲಿ ಕಟ್ಟಡವನ್ನು ನೋಡುತ್ತೇನೆ ಆದರೆ ಅದು ಯಾರಿಗೆ ಸೇರಿರುತ್ತದೆ ನನಗೆ ಗೊತ್ತಿಲ್ಲ. ಅಳತೆ ಸಮಯದಲ್ಲಿ ನಾನು ಕಂಪನಿಯವರನ್ನು ವಿಚಾರ ಮಾಡಿರುವುದಿಲ್ಲ. ಕಂಪನಿ ಕಟ್ಟಡದ ಜಮೀನಿನ ಪೂರ್ವಕ್ಕೆ 1 ಎಕರೆ 28 ಗುಂಟೆ ಆಸ್ತಿ ಬೇರೆಯವರಿಗೆ ಸೇರಿದ ಎಂಬ ವಿಚಾರ ನನಗೆ ಗೊತ್ತಿಲ್ಲ. ಅಳತೆ ಸಮಯದಲ್ಲಿ ಸರ್ವೆ ನಂಬರ್ 32/ಪಿ ಪಹಣಿ ಪತ್ರಿಕೆ ನೋಡಿರುವುದಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸ್ಥಳಕ್ಕೆ ಹೋಗಿರುವುದಿಲ್ಲ ಮತ್ತು ಅಳತೆ ಕಾರ್ಯವನ್ನು ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಡಿಕ್ರಿದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

1 ನೇ ಅರ್ಜಿದಾರರು ಗೈರು ಹಾಜರು ಆದ್ದರಿಂದ ಪಾರ್ಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.